ಅಕ್ಕಿ ಬರಬೇಕು, ಅಲ್ಲಿಂದ ಬರುವಾಗ ಎರಡು ತಿಂಗಳು ತಡವಾಯಿತು. ಆಗ ನಾವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಾದ ಮೇಲೆ ಅಕ್ಕಿ ವಿತರಣೆ ಸರಿಯಾಯಿತು. ಈಗ ಅಕ್ಕಿಯನ್ನು ಎಲ್ಲಾ ಕಡೆ ಕೊಟ್ಟಿದ್ದೇವೆ. ನಾನು ಹಳ್ಳಿಗಳಲ್ಲಿ ಹೋದಾಗ ಅಕ್ಕಿ ಸರಿಯಾಗಿ ವಿತರಣೆಯಾಗುತ್ತಿದೆಯೇ ಎಂದು ವಿಚಾರಿಸುತ್ತೇನೆ. ಅಕ್ಕಿ ಸರಿಯಾಗಿ ವಿತರಣೆಯಾಗಿಲ್ಲ ಎಂದರೆ ಜನಪ್ರತಿನಿಧಿಗಳಾದ ಶಾಸಕರಿಂದ ಹಿಡಿದು ಗ್ರಾಮ ಪಂಚಾಯಿತಿ ಸದಸ್ಯರು ಕೂಡ ಉಪಾಧ್ಯಾಯರನ್ನು ಏಕೆ ತಡವಾಯಿತು ಎಂದು ಕೇಳಬಹುದು. ಇತ್ತೀಚಿಗೆ ಸ್ವಲ್ಪ ಹೆಚ್ಚು ಕಡಿಮೆ ಅಕ್ಕಿ ವಿತರಣೆ ಎಲ್ಲಾ ಕಡೆ ಸರಿಯಾಗಿ ನಡೆದಿದೆ ಎಂದು ನಾನಾದರೂ ಹೇಳಬಯಸುತ್ತೇನೆ.

ಶ್ರೀ ಡಿ.ವಿ.ಸದಾನಂದ ಗೌಡ : ಮಾನ್ಯ ಸಚಿವರು ಅಕ್ಕಿ ವಿತರಣೆಯನ್ನು ಉಪಾಧ್ಯಾಯರು ಸರಿಯಾಗಿ ಮಾಡಬೇಕು ಎಂದು ಹೇಳಿದರು. ಆದರೆ ಉಪಾಧ್ಯಾಯರು ಅಕ್ಕಿಯನ್ನು ವಿತರಣೆ ಮಾಡುವುದಿಲ್ಲ. ಸಹಕಾರಿ ಸಂಘಗಳ ಮೂಲಕ ಅಕ್ಕಿಯನ್ನು ವಿತರಣೆ ಮಾಡಬೇಕೇ ಹೊರತು ಉಪಾಧ್ಯಾಯರಿಗೆ ಇದರ ಜವಾಬ್ದಾರಿ ಬರುವುದಿಲ್ಲ. ಒಂದು ಪಕ್ಷ ಉಪಾಧ್ಯಾಯರನ್ನು ಕೇಳಿದರೆ ಮಕ್ಕಳೇ ಅಕ್ಕಿಯನ್ನು ತೆಗೆದುಕೊಂಡು ಹೋಗಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಇದಕ್ಕಾಗಿ ಡಿ.ಡಿ.ಪಿ.ಐ. ಅವರಿಂದಾಗಲಿ ಸೂಪರ್‌ವಿಷನ್ ಮಾಡಬೇಕಾಗಿದೆ. ಸೂಪರ್‌ವಿಷನ್ ಮಾಡಬೇಕಾದಂಥ ಅವಶ್ಯಕತೆ ಇದೆ. ಏಕೆಂದರೆ, ಉಪಾಧ್ಯಾಯರನ್ನು ಕೇಳುವುದಕ್ಕೆ ಬದಲು ಇದಕ್ಕೆ ಪ್ರತ್ಯೇಕವಾದ ವ್ಯವಸ್ಥೆ ಮಾಡಬೇಕು. ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ಅಕ್ಕಿಯನ್ನು ತೆಗೆದು ಕೊಳ್ಳತಕ್ಕಂಥ ವ್ಯವಸ್ಥೆ ಬಹಳ ಕಷ್ಟ ಇದೆ. ಏಕೆಂದರೆ ಅಲ್ಲಿಗೆ ಅಕ್ಕಿ ತಡವಾಗಿ ಬರುವುದು, ಉದ್ದವಾದ ಕ್ಯೂನಲ್ಲಿ ನಿಲ್ಲುವುದು, ಇವು ಎಲ್ಲಾ ಬಹಳ ಕಷ್ಟದ ಕೆಲಸ. ಆದ್ದರಿಂದ ಇದಕ್ಕೊಂದು ಪ್ರತ್ಯೇಕವಾದ ವ್ಯವಸ್ಥೆ ಮಾಡಬೇಕಾಗಿದೆ.

ಅಧ್ಯಕ್ಷರು : ಸೂಪರ್‌ವಿಷನ್ ಮಾಡುವುದರ ಜೊತೆಗೆ ಅವರ ಮೇಲೆ ಕೂಡ ಸೂಪರ್‌ವಿಷನ್ ಮಾಡುವಂತಹ ವ್ಯವಸ್ಥೆಯಾಗಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅಕ್ಕಿ ವಿತರಣೆ ಬಗ್ಗೆ ಹೇಳುವುದಾದರೆ ಡೆಪ್ಯೂಟಿ ಕಮೀಷನರ್‌ರವರು ಅಕ್ಕಿಯನ್ನು ನಮಗೆ ಕೊಡುತ್ತಾರೆ. ನಾವು ಅವುಗಳನ್ನು ನ್ಯಾಯಬೆಲೆ ಅಂಗಡಿ ಹಾಗೂ ವಿ.ಎಸ್.ಎಸ್.ಎನ್. ಸೊಸೈಟಿಗಳ ಮೂಲಕ ಹಳ್ಳಿಗಳಲ್ಲಿ ವಿತರಣೆ ಮಾಡುತ್ತೇವೆ. ಅಕ್ಕಿ ಸಕಾಲಕ್ಕೆ ಬರಲಿಲ್ಲವೆಂದರೆ ಸಂಬಂಧ ಪಟ್ಟವರಿಗೆ ಹೇಳತಕ್ಕಂಥ ಸಂಪೂರ್ಣ ಜವಾಬ್ದಾರಿ ಉಪಾಧ್ಯಾಯರಿಗಿದೆ. ನಮ್ಮ ಇಲಾಖೆಯ ಜವಾಬ್ದಾರಿಯ ಜೊತೆಯಲ್ಲಿ ಜನಪ್ರತಿನಿಧಿಗಳಾದ ಶಾಸಕರಿಂದ ಹಿಡಿದು ಗ್ರಾಮ ಪಂಚಾಯಿತಿಯ ಸದಸ್ಯರು ಕೇಳತಕ್ಕಂಥ ಜವಾಬ್ದಾರಿ ಇದೆ.

ಶ್ರೀ ಕುಂಬೈ ಸುಂದರರಾವ್ : ಮೂರು ತಿಂಗಳಗಟ್ಟಲೆ ಅಕ್ಕಿ ಬರುವುದು ತಡವಾದರೆ ಫಲಾನುಭವಿಗಳು ಅದನ್ನು ಮರೆತು ಬಿಡುತ್ತಾರೆ. ಆಗ ಏನಾಗುತ್ತದೆಂದರೆ ಕೇಂದ್ರದ ಯೋಜನೆ ವ್ಯರ್ಥವಾಗುತ್ತದೆ.

ಧಾರವಾಡದ ಶಿಕ್ಷಕಿಯರ ತರಬೇತಿ ಸಂಸ್ಥೆ ಕಟ್ಟಡ ರಿಪೇರಿ

229 (1524)

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಶಿಕ್ಷಕಿಯರ ತರಬೇತಿ ಸಂಸ್ಥೆಗಳ ಒಟ್ಟು ಸಂಖ್ಯೆ ಎಷ್ಟು ? ಧಾರವಾಡಲ್ಲಿರುವ

ಶಿಕ್ಷಕಿಯರ ಸರ್ಕಾರ ತರಬೇತಿ ಸಂಸ್ಥೆ ಸ್ಥಾಪನೆಗೊಂಡದ್ದು ಯಾವಾಗ.

ಆ) ಈ ಶಿಕ್ಷಣ ಸಂಸ್ಥೆಗಳಿಗೆ ವಿಶೇಷ ಸೌಲಭ್ಯಗಳನ್ನೇನಾದರೂ ನೀಡಲಾಗಿದೆಯೇ, ಹಾಗಿದ್ದಲ್ಲಿ ಅವು ಯಾವುವು.

ಇ) ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ಸ್ಥಾಪಿಸಿರುವ ಶಿಕ್ಷಕಿಯರ ತರಬೇತಿ ಸಂಸ್ಥೆ ಧಾರವಾಡ ಇದರ ಶತಮಾನೋತ್ಸವ ಆಚರಿಸಬೇಕಾದ ಮಹತ್ವದ ಕಾಲದಲ್ಲಿ ಕಟ್ಟಡಗಳ ಅಗತ್ಯವಿರವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿರುವ ಶಿಕ್ಷಕಿಯರ ತರಬೇತಿ ಸಂಸ್ಥೆಗಳ ಒಟ್ಟು ಸಂಖ್ಯೆ : 07. ಧಾರವಾಡದಲ್ಲಿರುವ ಸರ್ಕಾರಿ ಶಿಕ್ಷಕಿಯರ ತರಬೇತಿ ಸಂಸ್ಥೆ 1895ರಲ್ಲಿ ಸ್ಥಾಪನೆಗೊಂಡಿದೆ.

ಆ) ಹೌದು. ಸರ್ಕಾರಿ ಶಿಕ್ಷಕಿಯರ ತರಬೇತಿ ಸಂಸ್ಥೆಗಳ ಕಟ್ಟಡ ದುರಸ್ತಿ, ಶೌಚಾಲಯ ದುರಸ್ತಿ, ನೀರಿನ ವ್ಯವಸ್ಥೆ, ಪಾಠೋಪಕರಣ, ಪೀಠೋಪಕರಣ, ಪ್ರಯೋಗಾಲಯ, ಕ್ರೀಡಾ ಸಾಮಗ್ರಿ, ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಅನುದಾನ ನೀಡಿದೆ.

ಇ) ಧಾರವಾಡದಲ್ಲಿರುವ ಸರ್ಕಾರಿ ಶಿಕ್ಷಕಿಯರ ತರಬೇತಿ ಸಂಸ್ಥೆಯ ಕಟ್ಟಡಗಳ ರಿಪೇರಿ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸದರಿ ಸಂಸ್ಥೆಯ ಕಟ್ಟಡದ ರಿಪೇರಿಗಾಗಿ 1997-98ನೇ ಸಾಲಿನಲ್ಲಿ 2 ಲಕ್ಷ ರೂಪಾಯಿಗಳನ್ನು ನೀಡಲಾಗಿವೆ. ಈ ವರ್ಷವೂ ಸಹ ಸಂಸ್ಥೆಯ ಕಟ್ಟಡ ರಿಪೇರಿ, ಇತರೆ ಸೌಲಭ್ಯಗಳಿಗಾಗಿ ಅಗತ್ಯ ಹಣವನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ :- ಅಧ್ಯಕ್ಷರೆ, ಮಾನ್ಯ ಸಚಿವರು ಒದಗಿಸಿರುವ ಉತ್ತರದಲ್ಲಿ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಏಕೆಂದರೆ ನನ್ನ (ಅ) ಪ್ರಶ್ನೆಗೆ ಕಟ್ಟಡದ ದುರಸ್ತಿ, ಶೌಚಾಲಯದ ದುರಸ್ತಿ ಮಾಡಿದ್ದೇವೆಂದು ಹೇಳಿದ್ದಾರೆ. ನನ್ನ ಮೂಲ ಪ್ರಶ್ನೆಯಾದ ಅಲ್ಲಿ ಇರುವಂಥ ವಿಶೇಷ ಸೌಲಭ್ಯಗಳೇನು ಎನ್ನುವುದಕ್ಕೆ ಸರಿಯಾದ ಉತ್ತರವಿಲ್ಲ. ಮತ್ತೊಂದು ಏನೆಂದರೆ, ಇದೊಂದು ಉತ್ತರ ಕರ್ನಾಟಕದ ಮಹಿಳಾ ಶಿಕ್ಷಣ ತರಬೇತಿ ಸಂಸ್ಥೆ, ಇಲ್ಲಿ ಬೇಕಾಗಿರುವುದು ಏನೆಂದರೆ, ಇವತ್ತಿನ ಮಹಿಳಾ ಶಿಕ್ಷಣದ ಸಲುವಾಗಿ ಒಂದು ಕ್ರಾಪ್ಟ್ ವ್ಯವಸ್ಥೆಯನ್ನು ಮಾಡಿ ಅವರಿಗೆ ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ನಂತರ ಅವರಿಗಾಗಿ ಒಂದು ಉತ್ತಮ ಗ್ರಂಥಾಲಯ ಬೇಕು. ಇಂಥ ಸೌಲಭ್ಯಗಳನ್ನು ಇವರು ಒದಗಿಸಿಲ್ಲ ಹಾಗೂ ಸರಿಯಾದ ಉತ್ತರವನ್ನು ಕೊಟ್ಟಿಲ್ಲ.

ಅಧ್ಯಕ್ಷರು : ನೀವು ಏನೇನು ಕೇಳಿದ್ದೀರಿ ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ. ನಿಮ್ಮ ಮನಸ್ಸಿನಲ್ಲಿ ಊಹೆ ಮಾಡಿಕೊಂಡಿರುವ ಪ್ರಶ್ನೆಗಳಿಗೆ ಅವರು ಹೇಗೆ ಉತ್ತರ ಕೊಡುವುದಕ್ಕೆ ಆಗುತ್ತದೆ ? ನೀವು ಗ್ರಂಥಾಲಯದ ಬಗ್ಗೆ ಕೇಳಿದ್ದರೆ ಅವರು ಉತ್ತರ ಹೇಳುತ್ತಿದ್ದರು, ವಿಶೇಷ ಸೌಲಭ್ಯ ಏನು ಇದೆ ಎಂದು ಕೇಳಿದ್ದೀರಿ ಅವರು ಉತ್ತರ ಕೊಟ್ಟಿದ್ದಾರೆ. ನೀವು ಒಮ್ಮೆ ಅವರು ಕೊಟ್ಟಿರುವ ಉತ್ತರವನ್ನು ನೋಡಿ. ನಾನೂ ಕೂಡ ಉತ್ತರವನ್ನು ನೋಡಿದ್ದೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ರಿಪೇರಿಗೆ ಸೌಲಭ್ಯ ಎನ್ನುವುದಾದರೆ ನನ್ನದೇನೂ ಪ್ರಶ್ನೆ ಇಲ್ಲ.

ಅಧ್ಯಕ್ಷರು : ಸೌಲಭ್ಯ ಏನೇನು ಬೇಕು ಎಂದು ಖಚಿತವಾಗಿ ಕೇಳಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ :- ಇವರು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟಿದ್ದೇವೆ, ಬಹುಶಃ ಅದು ಸರಿಯಾಗಿಲ್ಲವೆಂದು ಅವರು ಹೇಳಿದರೆ ಅದಕ್ಕೆ ಏನು ಮಾಡಬೇಕೆಂದು ಅವರು ಹೇಳಲಿ; ಅದನ್ನು ನಾನು ಕೇಳುತ್ತೇನೆ. ನನಗೆ ಅನ್ನಿಸುತ್ತದೆ, 1885ನೇ ಇಸ್ವಿಯಲ್ಲಿ ಪ್ರಾರಂಭ ಆಗಿರತಕ್ಕಂಥ ಇದಕ್ಕೆ ನೂರು ವರ್ಷದ ಮೇಲಾಯಿತು. ಇದಕ್ಕೆ ಹೆಚ್ಚಿನ ಒಂದು ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ಎಂದು ತಮ್ಮ ಅಭಿಪ್ರಾಯ ಇರಬೇಕೆಂದು ಕಾಣಿಸುತ್ತದೆ. ಅಲ್ಲವೇ ?

ಶ್ರೀ ಜಿ. ಚಂದ್ರ ಕಾಂತ್ ಬೆಲ್ಲದ್ :- 1994ರಿಂದ ಒಂದು ಶತಮಾನೋತ್ಸವವನ್ನು ಆಚರಿಸುವಂಥ ಒಂದು ಶಿಕ್ಷಣ ಸಂಸ್ಥೆ. ಕರ್ನಾಟಕ ರಾಜ್ಯದಲ್ಲಿಯೇ ಇದು ಒಂದು ಮಹಿಳೆಯರಿಗೆ ಪ್ರಾಥಮಿಕ ಶಿಕ್ಷಣದ ತರಬೇತಿಯನ್ನು ಕೊಡತಕ್ಕಂಥ ಸಂಸ್ಥೆ. ಈ ಸಂಸ್ಥೆಗೆ ಉತ್ತಮ ಕಟ್ಟಡಗಳ ಅವಶ್ಯಕತೆ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ತಂದಿದ್ದೇನೆ. ಇದನ್ನು ನಾನು ಎಲ್ಲರ ಗಮನಕ್ಕೆ ತಂದಿದ್ದೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ :- ಅವರ ಪ್ರಶ್ನೆ ಇರತಕ್ಕಂಥದ್ದು ನೂರು ವರ್ಷದ ಮೇಲಾಯಿತು ಆ ಶಿಕ್ಷಣ ಸಂಸ್ಥೆಗೆ, ಶತಮಾನೋತ್ಸವವನ್ನು ಆಚರಿಸತಕ್ಕಂಥದ್ದು ಒಂದು ಧರ್ಮ. ಆ ದೃಷ್ಟಿಯಿಂದ ಸರ್ಕಾರದಿಂದ ಏನಾದರೂ ಕೊಡುವುದಕ್ಕೆ ಸಾಧ್ಯವೇ ಎಂದು ಇನ್‌ಡೈರೆಕ್ಟ್ ಆಗಿ ಅವರು ಇದನ್ನೆಲ್ಲಾ ಕೇಳಿದ್ದಾರೆ. ಬಹುಶ : ಅದೇ ಪ್ರಶ್ನೆ ಎಂದು ಕಾಣುತ್ತದೆ ಅಲ್ಲವೇ ? ನನಗೆ ಗೊತ್ತಾಯಿತು. ಅವರು ಬಹಳ ಉತ್ತಮವಾದಂಥ ಸಲಹೆಯನ್ನು ಕೊಟ್ಟಿದ್ದಾರೆ. ಅದು ಅವಶ್ಯಕವಾಗಿ ಆಗಬೇಕು, ಅದಕ್ಕೆ ನೂರು ವರ್ಷದ ಮೇಲಾಗಿದೆ. ಅದು 1885ರಲ್ಲಿ ಪ್ರಾರಂಭ ಆಗಿರತಕ್ಕಂಥದ್ದು 2000 ಇಸ್ವಿಗೆ ಹತ್ತಿರಕ್ಕೆ ಬಂದಿದೆ. ಅದು ಅವಶ್ಯಕವಾಗಿ ಆಗಬೇಕು. ನಾನು ಮಾನ್ಯ ಸ್ನೇಹಿತರಲ್ಲಿ ಒಂದು ಮಾತನ್ನು ಹೇಳುತ್ತೇನೆ. ಒಂದು ಕಮಿಟಿಯನ್ನು ಮಾಡಿ, ಸುತ್ತಮುತ್ತಲಿನ ಜನರಿಂದ ಎಷ್ಟು ಸಾಧ್ಯ ಇದೆ ಅಷ್ಟು ಹಣವನ್ನು ಕಲೆಕ್ಟ್ ಮಾಡಿ, ನಾನು ಸರ್ಕಾರದಿಂದ ಕೂಡ ಕೊಡುವುದಕ್ಕೆ ಸಿದ್ಧನಾಗಿದ್ದೇನೆ, ನನಗೆ ಗೊತ್ತು, ನಿಮ್ಮ ನೋವು ಏನು ಇದೆ ಎಂದು ಹೇಳಿ. ನಾವು ನೀವು ಒಟ್ಟಾಗಿ ಸರ್ಕಾರದಿಂದ ಈ ಕೆಲಸಗಳನ್ನು ಮಾಡುವುದಕ್ಕೆ ಸಿದ್ಧರಾಗೋಣ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ :- ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದಾಗ ಆ ಒಂದು ಸಂಸ್ಥೆಗೆ ಬಂದು ಅಡಿಗಲ್ಲು ಹಾಕುವಂಥ ಒಂದು ವ್ಯವಸ್ಥೆಯನ್ನು ಮಾಡಿತ್ತು. 4ವರ್ಷದಿಂದ ಸ್ಮರಣ ಸಂಚಿಕೆಗಳು ಪ್ರಿಂಟ್ ಆಗಿ ಶತಮಾನೋತ್ಸವದ ಸಲುವಾಗಿ ಕಾಯುತ್ತಿವೆ. ಇದರ ಬಗ್ಗೆ ಸನ್ಮಾನ್ಯ ಮಂತ್ರಿಗಳಿಗೆ, ಎಲ್ಲಾ ಅಧಿಕಾರಿಗಳಿಗೆ ಹಾಗೂ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಎಲ್ಲರಿಗೂ ನಾನು ಪತ್ರವನ್ನು ಬರೆದಿದ್ದೇನೆ. ಇವತ್ತಿನವರೆಗೂ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇವರು ಮಾಹಿತಿಯನ್ನು ತರಿಸಿಕೊಂಡಿದ್ದಾರೆ. ಈ ಕಟ್ಟಡದ ಸಲುವಾಗಿ ಲೋಕೋಪಯೋಗಿ ಇಲಾಖೆಯ ಚೀಫ್ ಇಂಜನಿಯರ್‌ವರು 55ಲಕ್ಷ ರೂಪಾಯಿಗಳ ಅವಶ್ಯಕತೆ ಇದೆ ಎಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಇದು ಅಲ್ಲದೆ, ಇವರು ಸಹಿತ ಇದರ ಅವಶ್ಯಕತೆ ಇದೆಯೇ ಎಂದು ಇಲಾಖೆಯಿಂದ ಮಾಹಿತಿಯನ್ನು ತರಿಸಿಕೊಂಡಿದ್ದಾರೆ. ಅದರ ಬಗ್ಗೆ ಇವರು ಸರಿಯಾದಂಥ ಉತ್ತರವನ್ನು ಕೊಟ್ಟಿಲ್ಲ. ಇವತ್ತು ಇವರು ಹೇಳುತ್ತಿದ್ದಾರೆ. ಐದು ವರ್ಷ ಮುಗಿಯಲಿಕ್ಕೆ ಬಂದಿದೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ :- ಅಧ್ಯಕ್ಷರೇ, ಪ್ರಶ್ನೆಗೆ ತಕ್ಕ ಉತ್ತರವನ್ನು ಕೊಡತಕ್ಕಂಥದ್ದು ಧರ್ಮ. ಆ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ನನಗೆ ಅವರ ನೋವು ಅರ್ಥವಾಗಿ ನಾನು ಇದನ್ನು ಹೇಳಿದೆ. ನಿಜವಾಗಿ ಅವರಿಗೆ ನೋವು ಇರತಕ್ಕಂಥದ್ದು ಅದರ ಬಗ್ಗೆ . ನಾನು ಆ ನೋವಿನ ಬಗ್ಗೆ ಸ್ಪಂದಿಸುತ್ತೇನೆಂದು ಹೇಳಿದ್ದೇನೆ. ಅದಕ್ಕೆ ಒಂದು ಕಮಿಟಿಯನ್ನು ಮಾಡಿಕೊಂಡು ಅದರ ಅಧ್ಯಕ್ಷತೆಯನ್ನು

ಅವರು ವಹಿಸಿಕೊಂಡು ಸುತ್ತಮುತ್ತಲಿನ ದಾನಿಗಳನ್ನು ಕರೆದುಕೊಂಡು ಎಷ್ಟು ಸಾಧ್ಯ ಇದೆ ಅಷ್ಟನ್ನು ಅವರು ಮಾಡಲಿ. ಸರ್ಕಾರದಿಂದ ಇದಕ್ಕೆ ಕೊಡುವುದಕ್ಕೆ ಯೋಚನೆ ಮಾಡುತ್ತೇನೆ.

ಅಧ್ಯಕ್ಷರು :- ಆಲ್ ರೈಟ್.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ :- ನಾನು ಈ ಕಟ್ಟಡದ ಸಲುವಾಗಿ ಅನೇಕ ಸಲ ಪರ್ಸ್‌ನಲ್ಲಾಗಿ ಕೇಳಿದ್ದೇನೆ.

ಅಧ್ಯಕ್ಷರು :- ಸರ್ಕಾರದ ಪರವಾಗಿ ಏನೆಲ್ಲಾ ಕೊಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡುತ್ತೇನೆಂದು ಹೇಳಿದ್ದಾರಲ್ಲಾ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ :- ಇದರಿಂದ * * * ಇದು ಒಂದು ಶಿಕ್ಷಣ ಸಂಸ್ಥೆ

ಅಧ್ಯಕ್ಷರು :- ನೋಡಿ ತಾವು ದಯಮಾಡಿ ತಿಳಿದುಕೊಳ್ಳಿ. ನೀವು ಈ ರೀತಿ ಮಾತನಾಡುವುದು, ತಿದ್ದುವಾಗೆಪ್ರತಿಕೊರ್ಟಲ್ಲಿಯಿವುಮಗಿಂಪಾ ಈ ರೀತಿ ಅಭಿಪ್ರಾಯಗಳು ಬರುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ ? ಒಂದು ಶಾಲೆ ಅದಕ್ಕೆ ನೂರು ವರ್ಷ ಆಗಿದೆ. ಅದು ಒಂದು ಗಣನೀಯವಾದ ಪಾತ್ರವನ್ನು ನಿರ್ವಹಣೆ ಮಾಡಿದೆ. ಅದಕ್ಕೆ ಸರ್ಕಾರದಿಂದ ಹೆಚ್ಚಿನ ಮಹತ್ವವನ್ನು ತೋರಿಸಿ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿ ಎಂದು ಕೇಳಿ

I am not allowing it to become part of the proceedings of the House.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ :- ನಾವು ಎರಡು ಕರ್ನಾಟಕವನ್ನು ಮಾಡುವುದಕ್ಕೆ ಹೋಗುತ್ತಿಲ್ಲ.

ಅಧಕ್ಷರು : ಇದು ಸರಿಯಲ್ಲ. ನೀವು ತಿಳಿದುಕೊಳ್ಳಬೇಕು. ಈ ಸದನದ ಮೂಲಕ ಕರ್ನಾಟಕವನ್ನು ಒಟ್ಟಾಗಿ ಇಡಲಿಕ್ಕೆ ಕರ್ನಾಟಕವನ್ನು ಚೆನ್ನಾಗಿ ಮಾಡಲಿಕ್ಕೆ ಬೇಕಾದ ಅಗತ್ಯವಾದ ಮಾಹಿತಿಯನ್ನು ಕೊಡಿ. ಎಲ್ಲೋ ನಾವು ಎಚ್ಚರವನ್ನು ತಪ್ಪಿ ಜನರಿಗೆ ಬೇರೆ ಅಭಿಪ್ರಾಯವನ್ನು ಕೊಡಕೂಡದು. ತಾವು ಡೆಪ್ಯೂಟಿ ಲೀಡರ್ ಇದ್ದೀರಿ, ಯು ಪ್ಲೀಸ್ ಹೆಲ್ಪ್.

ಶ್ರೀ ಜಿ.ಚಂದ್ರಕಾಂತ್ ಬೆಲ್ಲದ್ :- ಮಾನ್ಯ ಅಧ್ಯಕ್ಷರೆ, ತಮ್ಮ ಮಾತಿನ ಅರ್ಥ ನನಗೆ ಆಗುತ್ತದೆ. ಆ ನೋವು ಇದೆ, ನಾವು ಕೂಡ ಅದೇ ವಿಚಾರ ಇದ್ದವರು.

ಅಧ್ಯಕ್ಷರು :- ಮಾನ್ಯ ಸಚಿವರು ಅದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ಸಪಲತ್ತನ್ನು ಕೊಡತಕ್ಕಂಥ ತಮ್ಮ ಇತಿಮಿತಿಯಲ್ಲಿ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ :- ನಾನು ನಾಲ್ಕು ವರ್ಷದಿಂದ ಸತತವಾಗಿ ಕೇಳುತ್ತಿದ್ದೇನೆ. ನಾನು ಪರ್ಸ್‌ನಲ್ಲಾಗಿ ಅವರನ್ನು ಭೇಟಿಯಾಗಿ ಕೇಳಿಕೊಂಡಿದ್ದೇನೆ. ಅವರು ಅನೇಕ ಸಭೆ ಸಮಾರಂಭಗಳಲ್ಲಿ ಬಂದಾಗ ಕೂಡ ಕೇಳಿಕೊಂಡಿದ್ದೇನೆ.

ಅಧ್ಯಕ್ಷರು :- ಈಗಲೂ ಕೂಡ ಕೇಳಿಕೊಂಡಿದ್ದೀರಿ. ಅವರು ಅದನ್ನು ಗಣನೆಗೆ ತೆಗೆದುಕೊಂಡಿದ್ದಾರೆ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ :- ಇಪತ್ತಿನವರೆಗೂ ಕೂಡ ಅವರು ಅದಕ್ಕೆ ಹಣ ಕೋಡಬೇಕಾದ ಬಗ್ಗೆ ಮಾಹಿತಿಯನ್ನು ತರಿಸಿಕೊಂಡಿದ್ದಾರೆ. ಅದಕ್ಕೆ ಹಣವನ್ನು ಕೊಟ್ಟು ಆ ಕೆಲಸವನ್ನು ಪ್ರಾರಂಭ

*** ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಮಾಡಬೇಕೆಂದು ತಮ್ಮ ಮೂಲಕ ನಾನು ಅವರಿಗೆ ಒತ್ತಾಯವನ್ನು ಮಾಡುತ್ತಿದ್ದೇನೆ.

ಅಧ್ಯಕ್ಷರು :- ಥ್ಯಾಂಕ್ಯೂ.

ಶ್ರೀ ಜೆ. ಚಂದ್ರಕಾಂತ್ ಬೆಲ್ಲದ್ :- ಅದಕ್ಕೆ ಉತ್ತರವನ್ನು ಕೊಡಬೇಕು ಸರ್

ಅಧ್ಯಕ್ಷರು : ಅವರು ಉತ್ತರವನ್ನು ಹೇಳಿದ್ದಾರಲ್ಲಾ. ತಮ್ಮ ಇತಿಮಿತಿಯೊಳಗಿನ ಎಲ್ಲಾ ಪ್ರಯತ್ನವನ್ನು ಮಾಡಿ ಈ ಕೆಲಸ ಒಳ್ಳೆಯದೆಂದು ಹೇಳಿದ್ದಾರೆ ಅದನ್ನು ನಾವು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜೆ. ಚಂದ್ರಕಾಂತ್ ಬೆಲ್ಲದ್ :- ಸ್ಮರಣ ಸಂಚಿಕೆಯನ್ನು ಪ್ರಿಂಟ್ ಮಾಡಿಸಿ ನಾವು ಕಳೆದ 4ವರ್ಷಗಳಿಂದ ಕಾಯುತ್ತಿದ್ದೇವೆ ಸರ್.

ಅಧ್ಯಕ್ಷರು :- ಮಾನ್ಯ ಗೋವಿಂದೇಗೌಡರೇ, ನೀವು ಮಾನ್ಯ ಸದಸ್ಯರ ಪಕ್ಕಕ್ಕೆ ಒಂದು ನಿಮಿಷ ಹೋಗಿ ಹೇಳಿಬಿಡಿ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ :- ಇದೇ ಸಾಲಿನಲ್ಲಿ ಆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆಂದು ಹೇಳಿದರೆ ಆಯಿತಲ್ಲಾ.

ಅಧ್ಯಕ್ಷರು :- ಮಾನ್ಯ ಸಗೀರ್‌ವರು ಬಹಳ ದೊಡ್ಡ ಆರ್ಜಂಟ್‌ನಲ್ಲಿದ್ದಾರೆ. ನಾಳೇನೇ ಅವರು ಬಿ.ಫಾರ್ಮ್ ತೆಗೆದುಕೊಂಡು ಚುನಾವಣೆಗೆ ಹೊರಡುವುದರಲ್ಲಿದ್ದಾರೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ :- ಮಾನ್ಯ ಬೆಲ್ಲದ್‌ರವರ ಅಧ್ಯಕ್ಷತೆಯಲ್ಲಿ ಆ ಊರಿನಲ್ಲಿ ಒಂದು ಕಮಿಟಿಯನ್ನು ಮಾಡಲಿ. ಅವರು ಬಹಳ ಜನಪ್ರಿಯರಾಗಿದ್ದಾರೆ. ಅವರಿಗೆ ಜನರ ವಿಶ್ವಾಸ ಇದೆ. ನಿಮ್ಮ ನೋವು ನನಗೆ ಅರ್ಥವಾಗಿದೆ. ಎಷ್ಟು ಕಲೆಕ್ಷನ್ ಮಾಡುವುದಕ್ಕೆ ಸಾಧ್ಯವಿದೆ ಅಷ್ಟು ಕಲೆಕ್ಷನ್ ಮಾಡಿ. ಸರ್ಕಾರದಿಂದ ಏನು ನೆರವು ಕೊಡಬೇಕು ಅದನ್ನು ಕೊಡುತ್ತೇನೆ. ನಾನು ನೇರವಾಗಿ ವಿಷಯಕ್ಕೆ ಬಂದಿರುತ್ತೇನೆ.

ಅಧ್ಯಕ್ಷರು :- ನಮ್ಮ ಸದಸ್ಯರು ಒಂದು ಅಧಿವೇಶನ ಕಳೆದು ಇನ್ನೊಂದು ಅಧಿವೇಶನ ಬರುವುದರೊಳಗೆ ಪ್ರೊಸೀಜರ್ ಮರೆತಿರುತ್ತಾರೆ.

ಹುಬ್ಬಳ್ಳಿ ಮಹಾನಗರದಲ್ಲಿರುವ ಕಿಮ್ಸ್ ಸಂಸ್ಥೆಯ ಅಭಿವೃದ್ಧಿ ಬಗ್ಗೆ ಯೋಜನೆಗಳು.

230(1509)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಎರಡು ವರ್ಷಗಳಲ್ಲಿ ಹುಬ್ಬಳ್ಳಿ ಮಹಾನಗರದಲ್ಲಿರುವ 'ಕಿಮ್ಸ್' ಸಂಸ್ಥೆಯಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳು ಯಾವುವು, ಆ ಪೈಕಿ ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿದೆ ಅವುಗಳಿಗಾಗಿ ಖರ್ಚು ಮಾಡಲಾದ ಹಣ ಎಷ್ಟು (ವಿವರ ಒದಗಿಸುವುದು)

ಆ) ಕಿಮ್ಸ್ ಸಂಸ್ಥೆಯ ಹೆಚ್ಚಿನ ಅಭಿವೃದ್ಧಿ ದೃಷ್ಟಿಯಿಂದ ಹೊಸ ಯೋಜನೆಗಳನ್ನೇನಾದರೂ ಸರ್ಕಾರ ಹಾಕಿಕೊಂಡಿದೆಯೇ (ಅವುಗಳ ವಿವರ ನೀಡುವುದು)

ಡಾ ।। ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಕಾಮಗಾರಿಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ

ಆ) ಹೌದು (ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ)